## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ
## ಶ್ರೀರಂಗಪಟ್ಟಣ

### ಸಿ.ಸಿ. 404 /2016

| | |
|---|---|
| ಸಿ.ಡಬ್ಲ್ಯೂ ಃ | 8 |
| ಪಿ.ಡಬ್ಲ್ಯೂ ಃ | 5 |

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಡಾ.ರಾಮಕೃಷ್ಣ |
| ತಂದೆ/ ಪತಿಯ ಹೆಸರು | ಃ | ಲೇಟ್ ಮೂಡಲಗಿರಿಗೌಡ |
| ವಯಸ್ಸು | ಃ | 62 ವರ್ಷ |
| ವೃತ್ತಿ | ಃ | ನಿವೃತ್ತ ನೌಕರರು |
| ವಾಸ | ಃ | ಬೆಂಗಳೂರು |

**ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 29.10.2025**

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ನಾನು ದಿನಾಂಕ 10.09.2013 ರಿಂದ 11.08.2016 ರವರೆಗೆ ಸಾರ್ವಜನಿಕ ಆಸ್ಪತ್ರೆ ಶ್ರೀರಂಗಪಟ್ಟಣದಲ್ಲಿ ಹಿರಿಯ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ02.02.2016 ರಂದು ರಾತ್ರಿ 10.30 ಗಂಟೆ ಸಮಯದಲ್ಲಿ ಅರಕೆರೆ ಪೊಲೀಸರು ವೆಂಕಟೇಶ್ ಎಂಬ ವ್ಯಕ್ತಿಯನ್ನು ಹಲ್ಲೆಯ ಸಂಬಂಧ ನಮ್ಮ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಬಂದಿರುತ್ತಾರೆ.

ನಂತರ ನಾನು ಸದರಿ ವೆಂಕಟೇಶ್ ರವರಿಗೆ ನಾನು ಪ್ರಥಮ ಚಿಕಿತ್ಸೆ ನೀಡಿರುತ್ತೇನೆ. ಅವರಿಗೆ ಈ ಕೆಳಕಂಡ ಗಾಯಗಳು ಆಗಿರುತ್ತದೆ.

1) ಎಡಗಣ್ಣಿನ ಹುಬ್ಬಿನ ಮೇಲೆ 1.5 ಸೆಂ.ಮಿ x 0.5 ಸೆ.ಮಿ ಅಳತೆಯ ಹರಿದ ಗಾಯ ಇರುತ್ತದೆ ಅದರ ಜೊತೆಗೆ ರಕ್ತವು ಸಹಾ ಹೆಪ್ಪುಗಟ್ಟಿರುತ್ತದೆ.

2) ಎಡಗಣ್ಣಿನ ಹೊರಭಾಗದಲ್ಲಿ ಎಡಭಾಗದಲ್ಲಿ ಚೂಪಾಗಿ ಕೊಯ್ದುಕೊಂಡು ಹೋಗಿರುವಂತಹ 1.5 ಸೆಂ.ಮಿ ಅಳತೆಯ ಗಾಯ ಆಗಿರುತ್ತದೆ. ಸದರಿ ಗಾಯವನ್ನು ಶುಚಿಗೊಳಿಸಲು ಹೋದಾಗ ರಕ್ತ ಸ್ರಾವ ಆಗಿರುತ್ತದೆ.

3) ತಲೆಯ ಹಿಂಭಾಗದಲ್ಲಿ 2 x 2 ಸೆಂ.ಮಿ ಅಳತೆಯ ಊತದ ಗಾಯ ಕಂಡು ಬಂದಿರುತ್ತದೆ.

ಸದರಿ ವ್ಯಕ್ತಿಯನ್ನು ಹೆಚ್ಚಿನ ಚಿಕಿತ್ಸೆಗಾಗಿ ಕೆ.ಆರ್. ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇನೆ. ಅಲ್ಲಿಂದ ಬಂದ ವರದಿ ಆಧಾರದ ಮೇಲೆ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ನನ್ನ ಅಭಿಪ್ರಾಯದಲ್ಲಿ ಸದರಿ ಗಾಯಗಳು ತಾಜಾ ಹಾಗೂ ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತದೆ. ಸಾಕ್ಷಿಗೆ ಈಗ ಗಾಯ ಪ್ರಮಾಣ ಪತ್ರವನ್ನು ತೋರಿಸಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.4 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು.

<u>ಪಾಟೀಸವಾಲು ಃ ಆರೋಪಿ ಪರ ವಕೀಲರಿಂದ</u>

ಗಾಯಾಳುವನ್ನು ಹೆಚ್ಚಿನ ಚಿಕಿತ್ಸೆಗಾಗಿ ಕೆ.ಆರ್. ಆಸ್ಪತ್ರೆಗೆ ಕಳುಹಿಸಿರುವ ಬಗ್ಗೆ ದಾಖಲೆಯನ್ನು ಪೊಲೀಸರಿಗೆ ನಾನು ನೀಡಿರುತ್ತೇನೆ.

ಸಾಮಾನ್ಯವಾಗಿ ಒಬ್ಬ ವ್ಯಕ್ತಿಯು ಬೈಕಿನಿಂದ ಸ್ಕಿಡ್ ಆಗಿ ಬಿದ್ದು ಜಾರಿ ಹೋದಾಗ ಗಾಯದ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುವ ಗಾಯಗಳು ಆಗಬಹುದು ಎಂದರೆ ಸಾಕ್ಷಿಯು ಆಗಬಹುದು ಎಂದು ನುಡಿಯುತ್ತಾರೆ.

ನೀವು ಗಾಯಾಳುವನ್ನು ಪರೀಕ್ಷಿಸಿ ಗಾಯವನ್ನು ಶುಚಿಗೊಳಿಸುವ ಸಮಯದಲ್ಲಿ ರಕ್ತಸ್ರಾವ ಆಗುತ್ತಿತ್ತು ಎಂದು ತಿಳಿಸಿದ್ದು ಆ ರೀತಿ 2 ಗಂಟೆಗೂ ಹೆಚ್ಚು ಕಾಲ ರಕ್ತ ಸ್ರಾವ ಆದರೆ ಆ ವ್ಯಕ್ತಿ ಪ್ರಜ್ಞಾಹೀನಾನಾಗುತ್ತಾನೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಗಾಯಾಳುವಿಗೆ ಸಣ್ಣ ಪ್ರಮಾಣದ ರಕ್ತ ಸ್ರಾವ ಆಗುತ್ತಿತ್ತು ಎಂದು ನುಡಿಯುತ್ತಾರೆ. ಗಾಯಾಳುವಿಗೆ ಚಿಕಿತ್ಸೆ ನೀಡುವಷ್ಟು ಗಾಯ ಆಗಿರಲಿಲ್ಲ ಎಂದರೆ ಸರಿಯಲ್ಲ. ಗಾಯಾಳುವಿಗೆ ಹಾಗೂ ಪೊಲೀಸರಿಗೆ

ಸಹಾಯ ಮಾಡಲೆಂದು ನಾನು ಸುಳ್ಳು ಗಾಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ .